## ನಕ್ಕುಬಿಡಿ



ಅಮ್ಮ: ಗುಂಡಾ ಸ್ವಲ್ಪ ಪಕ್ಕದ ಮನೆ ಆಂಟಿನ ಕರಿಯೋ.

ಗುಂಡ: ಕುಹೋ, ಕುಹೋ

ಅಮ್ಮ: ಲೋ ಆಂಟಿನ ಕೂಗು ಅಂದ್ರೇ ಕುಹೋ ಕುಹೋ ಅಂತಾ ಯಾಕೆ ಕೂಗುತ್ತಿದ್ದಿಯಾ?

ಗುಂಡ: ಅಪ್ಪ ಆಂಟಿನ ಹೀಗೆ ಕೂಗ್ತಿದ್ರು ಅವಾಗ ಆಂಟಿ ಹೊರಗೆ ಬರುತ್ತಿದ್ದರು. ಅದಕ್ಕೆ.

ಬ್ಯಾಂಕ್ ಮಾನೇಜರ್: ಹಸುವಿನ ಮೇಲೆ ಲೋನ್ ತೆಗೆದುಕೊಂಡಿದ್ದೀರಲ್ಲ ಹೇಗೆ ಕಟ್ತಿರಾ?

ತಿಮ್ಮ: ಹಗ್ಗದಿಂದ ಸಾರ್

★★★

ಹೆಂಡತಿ: ರೀ... ಯಾಕ್ರಿ ಪಕ್ಕದ ಮನೆಯವಳನ್ನು ಗುರಾಯಿಸಿಕೊಂಡು ನೋಡ್ತಿದ್ದೀರಾ?

ಗಂಡ: ಅಯ್ಯೋ ಇಲ್ಲಪ್ಪಾ ನಾ ಅವಳನ್ನ ನೋಡ್ತಿರಲಿಲ್ಲ ಅವಳು ಉಟ್ಕೊಂಡಿರೊ ರೇಷ್ಮೆ ಸೀರೆ ನೀನು ಉಟ್ಕೊಂಡ್ರೆ ಹೇಗೆ ಕಾಣಿಸ್ತೀಯಾ ಅಂತ ಯೋಚನೆ ಮಾಡ್ತಿದ್ದೆ.

★★★

ಮಹಿಳೆ: ಏನಪ್ಪ ನಿನ್ನ ವಯಸ್ಸೆಷ್ಟು?

ಪುಟ್ಟ: ಹತ್ತು ವರ್ಷ

ಮಹಿಳೆ: ನಾಲ್ಕು ವರ್ಷದಿಂದ ಇದೇ ವಯಸ್ಸು ಹೇಳ್ತಿದಿಯಲ್ಲ ಯಾಕೆ?

ಪುಟ್ಟ: ನನಗೆ ಇವತ್ತೊಂದು ನಾಳೆ ಒಂದು ಹೇಳಿ ಅಭ್ಯಾಸ ಇಲ್ಲ.

★★★

ಗಂಡ: ನನ್ನಲ್ಲಿ ಏನು ನೋಡಿ ಇಷ್ಟಪಟ್ಟು ಮದುವೆಯಾದೆ?

ಹೆಂಡತಿ: ಮದುವೆಗೆ ಮುಂಚೆ ಒಂದೆರಡು ಬಾರಿ ನಮ್ಮನೆ ಬಾಲ್ಕನಿಯಿಂದ ನೀವು ಬಟ್ಟೆ ಒಗೀತಾ ಇದ್ದದ್ದು, ಪಾತ್ರೆ ತೊಳೀತಾ ಇದ್ದಿದ್ದು ನೋಡಿದ್ದೆ.

★★★

ಅಪಹರಣಕಾರ: ನಿನ್ನ ಹೆಂಡತಿಯನ್ನು ಅಪಹರಿಸಿದ್ದೇವೆ ಸಾಕ್ಷಿಗೆ ಅವಳ ಬೆರಳು ಕತ್ತರಿಸಿ ಕಳಿಸ್ತೀನಿ ನೋಡು.

ಗುಂಡ: ಬೆರಳು ಕಳುಹಿಸಿದ್ರೆ ನಂಗೆ ಗುರುತು ಸಿಗಲ್ಲ ತಲೆ ಕಳುಹಿಸು.

★★★

ದೇವರು: ಏನು ವರ ಬೇಕು ಭಕ್ತಾ ನಿನಗೆ?

ಗುಂಡ: ನನಗೆ ದುಡ್ಡು ತುಂಬಿರುವ ಬ್ಯಾಗ್, ಸರ್ಕಾರಿ ಕೆಲಸ, ದೊಡ್ಡ ಗಾಡಿ, ಅದರೊಳಗೆ ಚೆಂದದ ಹುಡುಗಿಯರಿರಬೇಕು.

ದೇವರು: ತಥಾಸ್ತು

ಗುಂಡ: ಈಗ ಹೆಣ್ಣುಮಕ್ಕಳ ಕಾಲೇಜು ಮಾರ್ಗದ ಬಸ್ ಕಂಡಕ್ಟರ್.

★★★

ಹೆಂಡತಿ: ನಿಮ್ಮ ತಲೆಯಲ್ಲಿ ರಕ್ತ ಬರ್ತಾ ಇದೇ.

ಗಂಡ: ಅದು ಪಕ್ಕದ ಮನೆಯವ ಕಲ್ಲು ಹೊಡೆದ.

ಹೆಂಡತಿ: ನಿಮ್ಮ ಕೈಲಿ ಏನು ಇರಲಿಲ್ವಾ ನೀವೂ ಹೊಡಿಬೇಕಿತ್ತು.

ಗಂಡ: ನನ್ನ ಕೈಯಲ್ಲಿ ಅವನ ಹೆಂಡತಿಯ ಕೈ ಇತ್ತು.

★★★

ಹೆಂಡತಿ: ರ್ರೀ ನಿಮ್ಮ ಮೊಬೈಲ್ ಕದ್ದುಕೊಂಡು ಹೋಗುತ್ತಿದ್ದಾನೆ ಹಿಡಿಯಿರಿ.

ಗಂಡ: ಎಲ್ಲೇ ಹೋಗ್ತಾನೆ. ಬ್ಯಾಟರಿ ಖಾಲಿಯಾದ ಮೇಲೆ ನಮ್ಮ ಮನೆಗೆ ಬರಬೇಕು.

ಹೆಂಡತಿ: ಯಾಕೇ?

ಗಂಡ: ಚಾರ್ಜರ್ ನಮ್ಮ ಮನೇಲೇ ಅಲ್ವಾ ಇರೋದು.

★★★

ಹೆಂಡತಿ: ನಿಮಗೆ ಒಂದು ಕೆಲಸಾನೂ ಸರಿಯಾಗಿ ಮಾಡೋಕೆ ಬರಲ್ಲ

ಗಂಡ: ಏನಾಯ್ತೇ ನಿಂಗೆ ಬೆಳ್ಬೆಳಗೆ?

ಹೆಂಡತಿ: ನಿನ್ನೆ ಸಿಲೆಂಡರ್ ಬದಲಾಯಿಸಿದ್ರಲ್ಲ

ಗಂಡ: ಹ್ಞಂ ಏನಾಯ್ತು?

ಹೆಂಡತಿ: ಅದ್ದೇಗೆ ಜೋಡ್ಸಿದ್ರೋ ಏನೋ ಎರಡು ಬಾರಿ ಹಾಲು ಕಾಯಿಸಿದೆ ಒಂದು ಉಕ್ಕಿ ಹೊಯ್ತು ಒಂದು ಬಾರಿ ಒಡೆದು ಹೋಯ್ತು.

■ ಶರದ ಕುಲಕರ್ಣಿ ಬೀದರ


